ಅ) ಬೆಂಗಳೂರಿನ ದೊಡ್ಡ ಬಸವಣ್ಣ ದೇವಸ್ಥಾನ ಕಡ್ಲೆ ಪರಸೆ ಜಾತ್ರೆ ಆಗುವ ಜಾಗವನ್ನು ಖಾಸಗಿಯವರಿಗೆ ಗುತ್ತಿಗೆಗೆ ಕೊಡಲಾಗಿದೆಯೇ?

ಆ) ಹಾಗಿದ್ದಲ್ಲಿ ಸಾರ್ವಜನಿಕರಿಂದ ಈ ಬಗ್ಗೆ ಆಕ್ಷೇಪಣೆಗಳು ಬಂದಿದೆಯೇ?

ಇ) ಜಾಗ ಕೊಡುವಾಗ ಸರ್ಕಾರದವರು ನೀತಿ ನಿಯಮ ಪಾಲಿಸಿರುವರೇ?

ಈ) ಇಲ್ಲದಿದ್ದರೆ ಯಾವ ಕ್ರಮ ಅನುಸರಿಸಿಕೊಂಡು ಆ ಜಾಗವನ್ನು ಕೊಡಲಾಗಿದೆ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು) :

ಅ) ಪರಸೆಯ ಸಮಯದಲ್ಲಿ ಮಾರಾಟಗಾರರು ಉಪಯೋಗಿಸುವ ಒಂದು ಸಣ್ಣ ಭಾಗವನ್ನು ಖಾಸಗಿಯವರಿಗೆ ಗುತ್ತಿಗೆಗೆ ಕೊಡಲಾಗಿದೆ.

ಆ) ಕೆಲವು ಆಕ್ಷೇಪಣೆಗಳನ್ನು ಧಾರ್ಮಿಕದತ್ತಿ ಆಯುಕ್ತರವರಲ್ಲಿ ಮೌಖಿಕವಾಗಿ ಸಲ್ಲಿಸಲಾಗಿತ್ತು. ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಜಮೀನು ಗುತ್ತಿಗೆ ನೀಡುವ ವಿರುದ್ಧವಾಗಿ ರಿಟ್ ಅರ್ಜಿ ಸಲ್ಲಿಸಿ ತದನಂತರ ಅರ್ಜಿದಾರರು ಹಿಂದಕ್ಕೆ ಪಡೆದಿರುವರು.

ಇ) ದೇವಸ್ಥಾನದ ಹಿತದೃಷ್ಟಿಯಿಂದ ಕೆಲವು ನಿಯಮಗಳನ್ನು ಸಡಿಸಲಾಗಿದೆ.

ಈ) ದೇವಸ್ಥಾನದ ಹಿತದೃಷ್ಟಿಯಿಂದ ಹೊಲಸಿಗೆ ಗುರಿಯಾಗಿದ್ದ ಮತ್ತು ಅತಿಕ್ರಮಣಕ್ಕೆ ಒಳಗಾಗಿದ್ದ ಜಮೀನನ್ನು ಮತ್ತು ಇಂತಹ ಅಕ್ರಮಗಳು ಮುಂದುವರೆಯುವುದನ್ನು ತಪ್ಪಿಸಲು ಸಾಕಷ್ಟು ಗುಡವಿಲ್ ಹಣವನ್ನು ಪಡೆದು ಆಸ್ಪತ್ರೆ ಕಟ್ಟುವಂತಹ ಸಾರ್ವಜನಿಕ ಹಿತಾಸಕ್ತಿ ಕಾರ್ಯಗಳಿಗಾಗಿ ಗುತ್ತಿಗೆಗೆ ನೀಡಲಾಗಿದೆ.

ಬೆಂಗಳೂರು ನ್ಯಾಷನಲ್ ಕೊ-ಆಪರೇಟಿವ್ ಬ್ಯಾಂಕ್ ಸದಸ್ಯರ ಸಂಖ್ಯೆ

997 - ಶ್ರೀಮತಿ ಸುಮಾರು ವಸಂತ (ವೀರಾಜ ಪೇಟೆ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನ್ಯಾಷನಲ್ ಕೋ-ಆಪರೇಟಿವ್ ಬ್ಯಾಂಕ್ ನಿ. ಬೆಂಗಳೂರು ಇದರಲ್ಲಿರುವ ಒಟ್ಟು ಸದಸ್ಯರ ಸಂಖ್ಯೆ ಎಷ್ಟು?

ಆ) 1991-92ನೇ ಸಾಲಿನಲ್ಲಿ ತನ್ನ ಸದಸ್ಯರಿಗೆ ಮಂಜೂರು ಮಾಡಿರುವ ಸಾಲದ ಮೊತ್ತವೆಷ್ಟು? ವಿವಿಧ ವರ್ಗದ ಸಾಲ)

ಇ) 1992-93ನೇ ಸಾಲಿನಲ್ಲಿ ಎಷ್ಟು ಸಾಲದ ಮೊತ್ತವನ್ನು ವಜಾ ಮಾಡಲಾಗಿದೆಯೇ?

ಈ) ಸಾಲವನ್ನು ರದ್ದು ಮಾಡಬೇಕಾದಲ್ಲಿ ಅನುಸರಿಸಬೇಕಾದ ವಿಧಾನಗಳು?

ಉ) ಬ್ಯಾಂಕಿನ ನಿರ್ದೇಶಕರ ಸಂಬಂಧಿಗಳಿಗೆ ನೀಡಿರುವ ಸಾಲವನ್ನು ರದ್ದು ಮಾಡಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) :

ಅ) ಬ್ಯಾಂಕಿನಲ್ಲಿ ದಿನಾಂಕ 3-09- 1992ರ ವರೆಗೆ 11,156 ಸದಸ್ಯರಿದ್ದಾರೆ.

ಆ) 1991-92ನೇ ಸಾಲಿನಲ್ಲಿ ಬ್ಯಾಂಕು ಈ ಕೆಳಕಂಡ ಸಾಲಗಳನ್ನು ಮಂಜೂರು ಮಾಡಿರುತ್ತದೆ.

1) ಚಿನ್ನಾಭರಣ ಸಾಲ	77.00
2) ನಗದು ಸಾಲ	117.75
3) ಯಂತ್ರೋಪಕರಣಗಳ ಮತ್ತು ಸಲಕರಣೆಗಳ ಸಾಲ	30.85
4) ವಾಹನಗಳ ಸಾಲ	48.35
5) ಜಮೀನಿನ ಸಾಲ	244.46
6) ಚಿರಾಸ್ಥಿಗಳ ಮೇಲಿನ ಸಾಲ	96.17
ಒಟ್ಟು	**614.58**

ಇ) ಇಲ್ಲಿಯವರೆಗೆ ಯಾವುದೇ ರೀತಿಯ ಸಾಲವನ್ನು ಬ್ಯಾಂಕು ವಜಾ ಮಾಡಿರುವುದಿಲ್ಲ.

ಈ) ಪ್ರಶ್ನೆಯೇ ಉದ್ಭವಿಸುವಿದಿಲ್ಲ.

ಉ) ಪ್ರಶ್ನೆಯೇ ಉದ್ಭವಿಸುವುದಿಲ್ಲ.

ನಿಪ್ಪಾಣಿಯಲ್ಲಲಿರುವ ಹೆಚ್.ಎಸ್.ಎಸ್.ಕೆ. ಸಕ್ಕರೆ ಕಾರ್ಖಾನೆಯಲ್ಲಿನ ಗೋಣಿಚೀಲದ ಖರೀದಿ.

553 - ಶ್ರೀ ಸುಭಾಶ್ ಜೋಷಿ (ನಿಪ್ಪಾಣಿ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಿಪ್ಪಾಣಿಯಲ್ಲಿರುವ ಹೆಚ್.ಎಸ್.ಎಸ್.ಕೆ ಸಕ್ಕರೆ ಕಾರ್ಖಾನೆಯಲ್ಲಿ ಕಳೆದ ವರ್ಷ ಗೋಣಿಚೀಲಗಳ ಖರೀದಿಯಲ್ಲಿ ಅಕ್ರಮಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಸಹಕಾರಿ ಕಾಯ್ದೆ ಕಲಂ 64ರ ಅಡಿಯಲ್ಲಿ ವಿಚಾರಣೆ ನಡೆಸುವಂತೆ ಸಕ್ಕರೆ ನಿರ್ದೇಶಕರನ್ನು ಈಗಿನ ನಿರ್ದೇಶಕರ ಮಂಡಳಿಯವರು ಒತ್ತಾಯಿಸಿದ್ದಾರೆಯೇ?

ಇ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ತೆಗೆದುಕೊಂಡ ಕ್ರಮವೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) :

ಅ) ಹೌದು.

ಆ) ಹೌದು

ಇ) ಸಕ್ಕರೆ ನಿರ್ದೇಶಕರು ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ 1959ರ ಕಲಲಂ 64ರ ಅಡಿಯಲ್ಲಿ ತನಿಖೆ ನಡೆಸಲು ಬೆಳಗಾವಿ ಜಿಲ್ಲೆಯ ಸಹಕಾರಿ ಸಂಘಗಳ ಉಪ ನಿಬಂಧಕರನ್ನು ವಿಚಾರಣಾಧಿಕಾರಿಯಾಗಿ ನೇಮಿಸಿ ಆದೇಶ ಹೊರಡಿಸಿದ್ದಾರೆ.

ರೈತರಿಗೆ ಸಹಕಾರ ಸಂಸ್ಥೆಗಳ ಮತ್ತು ವಾಣಿಜ್ಯ ಬ್ಯಾಂಕುಗಳ ಮೂಲಕ ನೀಡಲಾದ ಸಾಲ.

555 - ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?